ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 06-05-1971.

*<u>ಬಾಪ್ ದಾದಾರವರ ವಿಶೇಷ ಶೃಂಗಾರ 'ಪ್ರಕಾಶ-ರತ್ನ'</u>* (बापदादा का विशेष श्रृंगार -- 'नूरे-रत्न')

ಇಂದು ರತ್ನಾಕರ ತಂದೆ ತಮ್ಮ ರತ್ನಗಳನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಪ್ರತಿಯೊಂದು ರತ್ನ ಯಥಾರ್ಥ ಪುರುಷಾರ್ಥ ಮಾಡುತ್ತಾ ಮುಂದುವರೆಯುತ್ತಿರುವದನ್ನು ನೋಡುತ್ತಿದ್ದಾರೆ. ನಾನು ಯಾವ ರತ್ನ ಎನ್ನುವುದನ್ನು ಪ್ರತಿಯೊಬ್ಬರೂ ತಿಳಿದುಕೊಂಡಿದ್ದೀರಾ? ಎಷ್ಟು ಪ್ರಕಾರದ ರತ್ನಗಳಿವೆ? (8 ರತ್ನಗಳಿವೆ) ನೀವು ಯಾವ ನಂಬರಿನ ರತ್ನವಾಗಿದ್ದೀರಿ. ವಜ್ರದ ಸಂಗದಲ್ಲಿದ್ದು ವಜ್ರವಾಗಿಲ್ಲವೇ? ರತ್ನ ಅಂತೂ ಎಲ್ಲರೂ ಆಗಿರುವಿರಿ ಒಂದು ರತ್ನವಿದೆ ಅದಕ್ಕೆ ಪ್ರಕಾಶದ ರತ್ನ (ನೂರೆ ರತ್ನ) ಎಂದು ಹೇಳುತ್ತಾರೆ. ಎಲ್ಲರೂ ಪ್ರಕಾಶದ ರತ್ನರಾಗಿಲ್ಲವೇ? ಒಂದಾಗಿದೆ ಪ್ರಕಾಶದ ರತ್ನ, ಇನ್ನೊಂದಾಗಿದೆ ಕೊರಳಿನ ಹಾರದ ರತ್ನ, ಮೂರನೆ ಸ್ಟೇಜ್ ಯಾವುದು ಗೊತ್ತಿದೆಯೇ? ಮೂರನೇಯದಾಗಿದೆ ಕೈಯ ಕಂಕಣದ ರತ್ನ. ಎಲ್ಲದಕ್ಕಿಂತ ನಂಬರ್‌ವನ್ ರತ್ನ ಪ್ರಕಾಶದ ರತ್ನ, ಅದು ಯಾರು ಆಗುತ್ತಾರೆ? ಯಾರ ನಯನಗಳಲ್ಲಿ ತಂದೆಯ ಹೊರತಾಗಿ ಅನ್ಯ ಯಾವುದೂ ನೋಡಿದರೂ ಕಾಣುವುದಿಲ್ಲವೋ ಅವರು ಪ್ರಕಾಶದ ರತ್ನ, ಮತ್ತು ಅವರು ತಮ್ಮ ಮುಖದಿಂದ ಜ್ಞಾನ ರತ್ನಗಳ ವರ್ಣನೆಯನ್ನೇ ಮಾಡುತ್ತಾರೆ. ಆದರೆ ಯಾವ ರೀತಿ ಮೊದಲನೇಯವರ ಬಗ್ಗೆ ತಿಳಿಸಿದೆನೋ, ಸದಾ ನಯನಗಳಲ್ಲಿ ತಂದೆ, ತಂದೆಯ ರೂಪವೇ ಎಲ್ಲರಿಗೂ ಕಂಡುಬರುತ್ತದೆ, ಅದಕ್ಕಿಂತ ಸ್ವಲ್ಪ ಕಡಿಮೆ, ಅವರು ಧ್ವನಿಯ ಮೂಲಕ ಸೇವೆ ಮಾಡುವುದರಿಂದ "ಕೊರಳಿನ ಹಾರದ ರತ್ನ" ಆಗುತ್ತಾರೆ. ಮತ್ತು ಮೂರನೇ ನಂಬರ್ ಯಾರು ಕೈಯ ಕಂಕಣದ ರತ್ನ ಆಗುತ್ತಾರೆ ಅವರ ವಿಶೇಷತೆ ಏನಾಗಿದೆ? ಒಂದಿಲ್ಲ ಒಂದು ರೂಪದಲ್ಲಿ ಸಹಾಯಕರಾಗುತ್ತಾರೆ. ಆದ್ದರಿಂದ ಸಹಾಯಕರಾಗಿರುವ ಚಿಹ್ನೆಯಾಗಿ ಬಾಹುಗಳ ಕಂಕಣದ ರತ್ನ ಆಗುತ್ತಾರೆ. ಈಗ ಪ್ರತಿಯೊಬ್ಬರೂ ತಮ್ಮನ್ನು ತಾವು ಕೇಳಿಕೊಳ್ಳಿ ನಾನು ಯಾವ ರತ್ನ? ಮೊದಲಿನ ನಂಬರ್, ಎರಡನೇಯ ನಂಬರ್ ಅಥವಾ ಮೂರನೇ ನಂಬರೋ? ರತ್ನ ಅಂತೂ ಎಲ್ಲರೂ ಆಗಿದ್ದಾರೆ ಮತ್ತು ಬಾಪ್ ದಾದಾ ಅವರ ಶೃಂಗಾರ ಸಹ ಎಲ್ಲರೂ ಆಗಿರುವಿರಿ. ಈಗ ಹೇಳಿರಿ, ಯಾವ ರತ್ನ? ಪ್ರಕಾಶದ ರತ್ನದ ಗುರುತು ಏನಿದೆ ಅದರಲ್ಲಿ ಪಾಸ್ ವಿತ್ ಆನರ್ ಆಗಿರುವಿರಾ? ಭರವಸೆಯುಳ್ಳವರಲ್ಲಿಯೂ ನಂಬರ್ ಇರುತ್ತದೆ. ಸದಾ ನಾನು ಬಾಪ್ ದಾದಾ ಅವರ ಪ್ರಕಾಶದ ರತ್ನ ಎನ್ನುವುದನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ. ಆಗ ನಮ್ಮ ಕಣ್ಣಿನಲ್ಲಿ ಅಥವಾ ದೃಷ್ಟಿಯಲ್ಲಿ ಅನ್ಯ ಯಾವ ವಸ್ತು ಸಮಾವೇಶವಾಗಲು ಸಾಧ್ಯವಿಲ್ಲ. ನಡೆಯುತ್ತಾ-ಓಡಾಡುತ್ತಾ, ತಿನ್ನುತ್ತಾ-ಕುಡಿಯುತ್ತಾ ನಿಮ್ಮ ಕಣ್ಣುಗಳಲ್ಲಿ ಏನು ಕಂಡುಬರಬೇಕು? ತಂದೆಯ ಮೂರ್ತಿ ಮತ್ತು ಮುಖ. ಇಂತಹ ಸ್ಥಿತಿಯಲ್ಲಿರುವುದರಿಂದ ಎಂದೂ ಯಾರೂ ದೂರುವುದಿಲ್ಲ. ಎಲ್ಲಾ ಭಿನ್ನ ಭಿನ್ನ ಪಕಾರದ ವ್ಯಾಕುಲ ಮಾಡುವ ಪರಿಸ್ಥಿತಿಗಳು ಮತ್ತು ವ್ಯಾಕುಲ ಮಾಡಲು ಕಾರಣ ನಿಮ್ಮ ಘನತೆಯಿಂದ ದೂರ ಆಗುವುದು. ಹಾಗಾದರೆ ವ್ಯಾಕುಲದ ಅರ್ಥ ಏನಾಯಿತು? ನಿಮ್ಮ ಘನತೆ ಏನಿದೆ ಅದರಿಂದ ದೂರ ಆಗುವುದರಿಂದ ವ್ಯಾಕುಲರಾಗಬೇಕಾಗುತ್ತದೆ. ನಿಮ್ಮ ಘನತೆಯಲ್ಲಿ ಸ್ಥಿತರಾಗಿರಿ ಆಗ ವ್ಯಾಕುಲರಾಗುವುದಿಲ್ಲ. ಆದ್ದರಿಂದ ಸರ್ವ ವ್ಯಾಕುಲತೆಯನ್ನು ಅಳಿಸಿಹಾಕಲು ಕೇವಲ ಒಂದು ಶಬ್ದದ ಅರ್ಥ ಸ್ವರೂಪದಲ್ಲಿ ಸ್ಥಿತರಾಗಿರಿ. ಅರ್ಥಾತ್ ನಿಮ್ಮ ಘನತೆಯ ಸ್ಥಿತಿಯಲ್ಲಿ ಸ್ಥಿತರಾಗಿರಿ ಆಗ ಘನತೆಯಿಂದ ಮಾನ ಸದಾ ಪ್ರಾಪ್ತಿ ಆಗುತ್ತದೆ. ಆದ್ದರಿಂದ ಸ್ಥಾನ ಮಾನ ಎಂದು ಹೇಳಲಾಗುತ್ತದೆ. ನಿಮ್ಮ ಘನತೆಯನ್ನು ತಿಳಿದುಕೊಳ್ಳಿ. ಯಾರು ಎಷ್ಟು ತನ್ನ ಘನತೆಯಲ್ಲಿ ಸ್ಥಿತರಾಗಿರುತ್ತಾರೆಯೋ ಅಷ್ಟು ಅವರಿಗೆ ಮಾನ ಸಿಗುತ್ತದೆ. ನಿಮ್ಮ ಘನತೆಯನ್ನು ತಿಳಿದುಕೊಂಡಿದ್ದೀರಾ? ಎಷ್ಟು ಉನ್ನತವಾದ ಘನತೆಯಿದೆ! ಲೌಕಿಕ ರೀತಿಯಲ್ಲಿಯೂ ಸಹ ಯಾರೂ ತನ್ನ ಘನತೆಯ ವಿರುದ್ಧ ಯಾವ ಕರ್ಮವನ್ನೂ ಮಾಡುವುದಿಲ್ಲ. ನಿಮ್ಮ ಘನತೆಯನ್ನು ಸದಾ ನೆನಪಿಟ್ಟುಕೊಳ್ಳಿ ಆಗ ಕರ್ಮವೂ ಘನತೆಯುಳ್ಳದ್ದಾಗಿರುತ್ತದೆ ಮತ್ತು ವ್ಯಾಕುಲರೂ ಆಗುವುದಿಲ್ಲ. ಇದು ವ್ಯಾಕುಲತೆಯನ್ನು ಅಳಿಸಿಹಾಕುವ ಸಹಜ ಯುಕ್ತಿಯಲ್ಲವೆ? ಯಾವುದೇ ಕೆಟ್ಟತನವನ್ನು ಸಮಾಪ್ತಿ ಮಾಡಲು ತಂದೆಯ ಮಹಿಮೆ ಮಾಡಿರಿ, (ಬುರಾಯಿ & ಬಡಾಯಿ) ಕೇವಲ ಒಂದು ಶಬ್ದದ ಅಂತರವಿದೆ! ಇದನ್ನು ಐದು ವರ್ಷದ ಮಗು ಸಹ ಮಾಡಲು ಸಾಧ್ಯವಿದೆ.

ಸದಾ ದೊಡ್ಡವರಿಗಿಂತ ದೊಡ್ಡವರಾದ ತಂದೆಯ ಮಹಿಮೆ ಮಾಡಿರಿ, ಇದರಲ್ಲಿ ಎಲ್ಲಾ ವಿದ್ಯಾಭ್ಯಾಸ ಬಂದುಬಿಡುತ್ತದೆ. ಹೀಗೆ ತಂದೆಯ ಮಹಿಮೆ ಮಾಡುವುದರಿಂದ ಏನಾಗುತ್ತದೆ? ಯುದ್ಧ ಬಂದ್ ಆಗುತ್ತದೆ. ಮಾಯೆಯ ಜೊತೆ ಯುದ್ಧ ಮಾಡಿ ಮಾಡಿ ಸುಸ್ತಾಗಿರುವಿರಿ ಅಲ್ಲವೆ. ತಂದೆಯ ಮಹಿಮೆ ಮಾಡಿದಾಗ ಯುದ್ಧದಲ್ಲಿ ಸುಸ್ತಾಗುವುದಿಲ್ಲ, ಆದರೆ ತಂದೆಯ ಗುಣಗಾಯನ ಮಾಡುವುದರಿಂದ ಯುದ್ಧವೂ ಆಟ ಎನಿಸುತ್ತದೆ. ಆಟದಲ್ಲಿ ಹರ್ಷವಿರುತ್ತದೆಯಲ್ಲವೆ. ಯಾರು ಯುದ್ಧವನ್ನು ಆಟ ಎಂದು ತಿಳಿಯುತ್ತಾರೆಯೋ ಅವರ ಚೆಹ್ನೆ ಏನಾಗಿರುತ್ತದೆ? ಹರ್ಷ. ಸದಾ ಹರ್ಷಿತರಾಗಿರುವವರನ್ನು ಮಾಯೆ ಯಾವ ರೂಪದಿಂದಲೂ ಆಕರ್ಷಣೆ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಮಾಯೆಯ ಆಕರ್ಷಣೆಯಿಂದ ಪಾರಾಗಲು ಒಂದು ಸದಾ ನಿಮ್ಮ ಘನತೆಯಲ್ಲಿರಿ ಮತ್ತು ಇನ್ನೊಂದು ಮಾಯೆಯನ್ನು ಆಟ ಎಂದು ತಿಳಿದು ಸದಾ ಹರ್ಷಿತವಾಗಿರಿ. ಕೇವಲ ಇವೆರಡು ಮಾತುಗಳು ನೆನಪಿದ್ದರೆ ಪ್ರತಿ ಕರ್ಮ ನೆನಪಾರ್ಥ ಆಗುವುದು. ಯಾವ ರೀತಿ ಸಾಕಾರದಲ್ಲಿ ಅನುಭವ ಮಾಡಿದಿರಿ ಯಾವ ರೀತಿ ಪ್ರತಿ ಕರ್ಮವನ್ನು ನೆನಪಾರ್ಥ ಮಾಡಿದರು. ಅದೇ ರೀತಿ ನಿಮ್ಮೆಲ್ಲರ ಪ್ರತಿ ಕರ್ಮ ನೆನಪಾರ್ಥ ಆಗಬೇಕು. ಅದಕ್ಕಾಗಿ ಎರಡು ಮಾತುಗಳನ್ನು ನೆನಪಿಟ್ಟುಕೊಳ್ಳಿ. ಸದಾ ನಿಮ್ಮನ್ನು ನೀವು ವಿಶ್ವ ಪರಿವರ್ತನೆಗೆ ಆಧಾರ ಮೂರ್ತಿ ಎಂದು ತಿಳಿದರೆ ಪ್ರತಿ ಕರ್ಮ ನೆನಪಾರ್ಥ ಆಗುವುದು. ಮತ್ತು ಜೊತೆ ಜೊತೆಗೆ ಉದಾರಚಿತ್ತರು ಅರ್ಥಾತ್ ಸರ್ವ ಆತ್ಮರ ಪ್ರತಿ ವೃತ್ತಿ, ದೃಷ್ಟಿಯಲ್ಲಿ ಸದಾ ಕಲ್ಯಾಣದ ಭಾವನೆ ಇರುವುದರಿಂದ ಪ್ರತಿ ಕರ್ಮ ಶ್ರೇಷ್ಠ ಆಗುವುದು. ಆದ್ದರಿಂದ ನಿಮ್ಮ ಪ್ರತಿ ಕರ್ಮ ಹೇಗಿರಬೇಕೆಂದರೆ ನೆನಪಾರ್ಥ ಆಗಲು ಯೋಗ್ಯವಾಗಿರಬೇಕು. ಇದನ್ನು ಅನುಸರಿಸುವುದು ಕಠಿಣವಿದೆಯೇನು? (ಮ್ಯೂಜಿಯಮ್ ಸೇವೆಗಾಗಿ ಪಾರ್ಟಿ ಹೋಗುತ್ತಿದೆ) ತ್ಯಾಗದಿಂದ ಭಾಗ್ಯ ಸದಾ ಸಿಗುತ್ತದೆ. ಯಾರು ತ್ಯಾಗ ಮಾಡುತ್ತಾರೋ ಅವರಿಗೆ ಸದಾ ಭಾಗ್ಯ ಪ್ರಾಪ್ತಿ ಆಗುತ್ತದೆ. ಆದ್ದರಿಂದ ಈ ಅತೀ ದೊಡ್ಡ ತ್ಯಾಗ ಯಾರು ಮಾಡುತ್ತಾರೋ ಅವರಿಗೆ ಅತಿ ದೊಡ್ಡ ಭಾಗ್ಯ ಜಮಾ ಆಗುತ್ತದೆ. ಆದ್ದರಿಂದ ಖುಷಿಯಿಂದ ಸೇವೆಗೆ ಹೋಗಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 06-05-1971.

**ಬಾಪ್ ದಾದಾರವರ ವಿಶೇಷ ಶೃಂಗಾರ - "ಪ್ರಕಾಶ ರತ್ನ"**

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಾಂತ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬಾಪ್ ದಾದಾರವರ ಪ್ರಕಾಶ ರತ್ನ. (ನಡೆಯುತ್ತಾ-ತಿರುಗಾಡುತ್ತಾ, ತಿನ್ನುತ್ತಾ-ಕುಡಿಯುತ್ತಾ, ಪ್ರತಿ ಕೆಲಸ ಕಾರ್ಯಗಳನ್ನು ಮಾಡುತ್ತಾ ನನ್ನ ನಯನಗಳಲ್ಲಿ ತಂದೆಯ ಮುಖ ಕಾಣಿಸುತ್ತಿದೆ.)

2. ನಾನು ನನ್ನ ಘನತೆ(ಗೌರವ)ಯಲ್ಲಿದ್ದು ವ್ಯಾಕುಲತೆಯನ್ನು ಸಮಾಪ್ತಿ ಮಾಡಿದ್ದೇನೆ.

3. ನಾನು ಸದಾ ಹರ್ಷಿತವಾಗಿ ಇರುವ ಮಾಯಾಜೀತ್ ಸ್ವರೂಪ.

4. ನಾನು ವಿಶ್ವ ಪರಿವರ್ತನೆಗೆ ಆಧಾರ ಮೂರ್ತಿ.

5. ನಾನು ಎಲ್ಲರ ಪ್ರತಿ ಸದಾ ಕಲ್ಯಾಣ ಭಾವದ ವೃತ್ತಿ ಮತ್ತು ದೃಷ್ಟಿ ಇರುವ ಉದಾರಚಿತ್ತ ಸ್ವರೂಪ.

6. ನಾನು ಸಂತೋಷವಾಗಿ ಸೇವೆಗೆ ಹೋಗಿ ಮಾಡಿರುವ ತ್ಯಾಗದಿಂದ ಸದಾ ಭಾಗ್ಯವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೇನೆ.